**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 229 /2018
ಪಿ.ಡಬ್ಲ್ಯೂ : 1

ದಿನಾಂಕಃ 08-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ ಆರ್ ಪಿ ವಕೀಲರಿಂದಃ

1. ದಾವಾ ಐಟಂ ನಂಬ್ರ 2 ರ 18 ಸೆಂಟ್ಸ್ ಜಾಗದ ಉತ್ತರಕ್ಕೆ ಖಾಸಗಿ ರಸ್ತೆ ಇರುತ್ತದೆ ಎಂದು ಹೇಳಿದ್ದು ಆ ರಸ್ತೆ ನಾನೇ ನಿರ್ಮಿಸಿರುತ್ತೇನೆ. ಈಗ 12 ವರ್ಷಗಳ ಹಿಂದೆ ಆ ರಸ್ತೆ ನಿರ್ಮಿಸಿರುತ್ತೇನೆ. ಬೇರೆಯವರ ಜಾಗದಲ್ಲಿ ಆ ರಸ್ತೆಯನ್ನು ನಾನೇ ನಿರ್ಮಾಣ ಮಾಡಿರುತ್ತೇನೆ, ನಮ್ಮ ಜಾಗದ ಮೇಲಲ್ಲ. 18 ಸೆಂಟ್ಸ್‌ಗೆ ತಾಗಿ ಉತ್ತರಕ್ಕೆ ಆ ರಸ್ತೆ ಇರುತ್ತದೆ. ಆ ರಸ್ತೆ ಬೇರೆ ಸರ್ವೆ ನಂಬ್ರದಲ್ಲಿ ಇರುತ್ತದೆ. ಆ ಸರ್ವೆ ನಂಬ್ರ ನನಗೆ ಗೊತ್ತಿರುವುದಿಲ್ಲ. ನಾನು ಐಟಂ ನಂಬ್ರ 2 ನ್ನು ಖರೀದಿ ಮಾಡುವಾಗ ಅದು ಗದ್ದೆ ಆಗಿತ್ತು. ಪ್ರತಿವಾದಿ ಜಾಗದ ಪೂರ್ವಕ್ಕೆ ನನ್ನ ಮನೆ ಇರುತ್ತದೆ. ಪ್ರತಿವಾದಿ ಜಾಗದ ಪಶ್ಚಿಮಕ್ಕೆ ಬೇರೆಯವರ ಸ್ಥಳ ಇರುತ್ತದೆ. ಉತ್ತರಕ್ಕೆ ನಮ್ಮದೇ ಜಾಗ ಐಟಂ ನಂಬ್ರ 1 ಸರ್ವೆ ನಂಬ್ರ 133/14 ರ ಜಾಗ ಇರುತ್ತದೆ.

2. ಸರ್ವೆ ನಂಬ್ರ 133/14 ರಲ್ಲಿ ನಮ್ಮ ಮನೆ ಇರುವುದಿಲ್ಲ. ಸರ್ವೆನಂಬ್ರ 133/14 ಖಾಲಿ ಜಾಗ ಇರುತ್ತದೆ. ಕನ್‌ವರ್ಶನ್ ಆಗಿರುತ್ತದೆ. ಸರ್ವೆ ನಂಬ್ರ 133/14 ರ ದಕ್ಷಿಣಕ್ಕೆ ಪ್ರತಿವಾದಿಯವರ ಮನೆ ಬರುತ್ತದೆ. ಸರ್ವೆ ನಂಬ್ರ 133/14 ರ ಪೂರ್ವಕ್ಕೆ ನಮ್ಮ ಮನೆ ಬರುತ್ತದೆ. ಸರ್ವೆ ನಂಬ್ರ 133/14 ರ ಉತ್ತರಕ್ಕೆ ಐಟಂ ನಂಬ್ರ 2 ರ ಸ್ವತ್ತು ಇರುತ್ತದೆ. ಪ್ರತಿವಾದಿಯವರ ಜಾಗದ ದಕ್ಷಿಣಕ್ಕೆ ಬೇರೆಯವರ ಮನೆ ಬರುತ್ತದೆ. ಪ್ರತಿವಾದಿಯವರ ಜಾಗದಲ್ಲಿ ಮನೆ ಇರುತ್ತದೆ. ನಾವು ಎರಡು ಜಾಗಗಳನ್ನು ಖರೀದಿ ಮಾಡುವ ಪೂರ್ವದಲ್ಲಿಯೇ ಆ ಮನೆ ಇತ್ತು. ಐಟಂ ನಂಬ್ರ 2 18 ಸೆಂಟ್ಸ್ ನ್ನು ಬಾಲಯ್ಯ ಶೇರಿಗಾರ್ ರವರಿಂದ ಖರೀದಿ ಮಾಡಿರುತ್ತೇನೆ. ಬಾಲಯ್ಯ ಶೇರಿಗಾರರವರಿಗೆ ಆ ಜಾಗ ಹೇಗೆ ಬಂತು ಎಂದು ನನಗೆ ಗೊತ್ತಿರುವುದಿಲ್ಲ. ಕ್ರಯ ಪತ್ರದಲ್ಲಿ ನಮೂದಿಸಲಾಗಿರುತ್ತದೆ, ಆದರೆ ನಾನು ನೋಡಿಕೊಂಡಿರುವುದಿಲ್ಲ. ಸಾಕ್ಷಿ ಪುನಃ ಭೂ ನ್ಯಾಯ ಮಂಡಳಿಯಲ್ಲಿ ತೀರ್ಪಾದ ಜಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

3. ಅದರ ಭೂ ಮಾಲೀಕರು ಯಾರು ಎಂದು ಗೊತ್ತಿರುವುದಿಲ್ಲ. ದಾವಾ ಐಟಂ ನಂಬ್ರ 1 ರ 7 ಸೆಂಟ್ಸ್ ಜಾಗವನ್ನು ಭಾಸ್ಕರ ಶೆಟ್ಟಿಗಾರ್ ರವರಿಂದ ಖರೀದಿ ಮಾಡಿರುತ್ತೇನೆ. ಅವರಿಗೆ ಆಸ್ತಿ ಹೇಗೆ ಬಂತು ಎಂದು ಗೊತ್ತಿರುವುದಿಲ್ಲ, ಆದರೆ ದಾಖಲೆಗಳು ಇರುತ್ತದೆ. ದಾವಾ ಐಟಂ 2 ಸರ್ವೆ ನಂಬ್ರ 130/9 ಇ 18 ಸೆಂಟ್ಸ್ ಜಾಗ ಪೂರ್ಣ ಸರ್ವೆ ನಂಬ್ರ ಆಗಿರುತ್ತದೆ. FMB ನಕ್ಷೆ ಆಗಿದ್ದು ಪೋಡಿ ಆಗಿರುತ್ತದೆ. ನಕ್ಷೆಯನ್ನು ಹಾಜರು ಪಡಿಸಬಹುದು. ಸರ್ವೆ ನಂಬ್ರ 130/09 ಇ ರ ಸಬ್ ಡಿವಿಜನ್ ನಲ್ಲಿ 18 ಸೆಂಟ್ಸ್ ಜಾಗದಲ್ಲಿ ಬೇರೆಯವರ ಆಸ್ತಿ ಇರುವುದಿಲ್ಲ ಎಂದರೆ ಸರಿ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**